## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.

## ಸಿ.ಸಿ.ನಂ. 1792/2019

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ |
| ತಂದೆಯ ಹೆಸರು | : | ಬೆಟ್ಟೇಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಮುಖ್ಯಪೇದೆ, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ |
| ವಾಸಸ್ಥಳ | : | ಪೊಲೀಸ್ ವಸತಿ ಗೃಹ, ನಂಜನಗೂಡು |

**ಸಾಕ್ಷಿಯನ್ನು ದಿನಾಂಕಃ 04.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು ಜುಲ್ಲೆ 2014 ರಿಂದ ಜುಲೈ 2022 ರವರೆಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 31.03.2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹೆಗ್ಗಡಹಳ್ಳಿ ಗ್ರಾಮದಲ್ಲಿ ಆರೋಪಿ ತನ್ನ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಚಾಸಾ-1 ರವರಿಗೆ ಮಾಹಿತಿ ಬಂದಿದ್ದು, ಅದರಂತೆ ಚಾಸಾ-1 ರವರು ನಮ್ಮ ಮೂಲಕ ಪಂಚರನ್ನು ಠಾಣೆಗೆ ಬರಮಾಡಿಕೊಂಡು ನಾನು, ಚಾಸಾ-2, 3, 5 ಮತ್ತು 6 ರವರು ಇಲಾಖಾ ವಾಹನದಲ್ಲಿ ಸಂಜೆ 6.30 ಗಂಟೆಗೆ ಹೆಗ್ಗಡಹಳ್ಳಿ ಗ್ರಾಮಕ್ಕೆ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ನೋಡಿದಾಗ ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನ 71 ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯದ ಪೌಚುಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು. ನಂತರ

ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿಯನ್ನು ಹಿಡಿದು ವಿಚಾರಿಸಿದಾಗ ತನಗೆ ಯಾವುದೇ ರಹದಾರಿ ಇರುವುದಿಲ್ಲವೆಂದು ಹೇಳಿರುತ್ತಾರೆ ಮತ್ತು ಸದರಿ ಮದ್ಯದ ಪೌಚುಗಳನ್ನು ನಂಜನಗೂಡಿನ ಗುರುರಾಜ ವೈನ್ಸ್ ಸ್ಟೋರ್ ನಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಎಲ್ಲಾ ಮದ್ಯದ ಪೌಚುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ M ಎಂಬ ಅಕ್ಷರದಿಂದ ಸೀಲ್ ಮಾಡಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮದ್ಯದ ಪೌಚುಗಳನ್ನು ವಶಪಡಿಸಿಕೊಂಡು ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ್ ತಯಾರಿಸಿರುತ್ತಾರೆ. ನಾವು ವಶಪಡಿಸಿಕೊಂಡ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಮತ್ತು ಮದ್ಯದ ಪೌಚುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುದ್ದೆ ಮಾಲು-1 ರಿಂದ 71 ನ್ನು ನೋಡಿ ಗುರುತಿಸಿರುತ್ತಾರೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎನ್.ಎಂ, ವಕೀಲರಿಂದಃ**

ನಾವು ರಸ್ತೆಯ ಎಡಭಾಗಕ್ಕೆ ನಿಂತು ಮನೆಯ ಹಿಂಭಾಗ ನೋಡುತ್ತಿದ್ದೆವು. ನಾವು ಒಟ್ಟು 5 ಜನ ಹೋಗಿದ್ದೆವು. ಜೀಪನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿದ್ದೆವು. ನಾವು ಪ್ಲಾಸ್ಟಿಕ್ ಚೀಲವನ್ನು ವಶಪಡಿಸಿಕೊಂಡಿಲ್ಲ. ನಾನು ಸ್ಥಳದಲ್ಲಿ ಯಾವುದೇ ಮದ್ಯದ ಪ್ಯಾಕೇಟುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿ ಮಾಡಿಲ್ಲ ಮತ್ತು ಆರೋಪಿಯನ್ನು ಸ್ಥಳದಲ್ಲಿ ಬಂದಿಸಿಲ್ಲ ಎಂದರೆ ಸರಿಯಲ್ಲ. ನಾನು ದಾಳಿ ಮಾಡಿದ ಸಮಯದಲ್ಲಿ ನನ್ನ ಜೊತೆ ಯಾವುದೇ ಪಂಚರು ಬಂದಿರಲಿಲ್ಲ ಮತ್ತು ಇದಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆ ಇರಲಿಲ್ಲ. ಆರೋಪಿಗೂ ಮತ್ತು ಟೆಟ್ರಾ ಪ್ಯಾಕೇಟುಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಹೆಸರಿನಲ್ಲಿ ಯಾವುದೇ ಮನೆಯಾಗಲಿ ಅಥವಾ ಅಂಗಡಿಯಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ನಂಜನಗೂಡು.**